Reg. No. | | | | | | | | | |

**BBAKAL 131/BBAKAL 104**

# I Semester B.B.A. Degree Examination, October/November 2019

*(Choice Based Credit System)*

*(New – 2018-19 onwards)*

*(2017-18 Batch onwards)*

Shri Dharmasthala Manjunatheshwara
College of Business Management Library
MANGALORE - 575 003

## Paper I – Kannada Language

### ಕನ್ನಡ ಭಾಷಾ ಪತ್ರಿಕೆ – I

Time : 3 Hours] [Max. Marks : 80

I. ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿರಿ : **(3 × 8 = 24)**

1. ಸೋದರತೆಯಿಂದ ಬಾಳಬೇಕಾದವರು ಪರಸ್ಪರ ಹಿಂಸಾ ಪ್ರವೃತ್ತಿಯಲ್ಲಿ ತೊಡಗಿಸಿಕೊಳ್ಳುವ ಬಗ್ಗೆ ಕವಿಯ ಖೇದ 'ಪಂಚ ನದಿಗಳ ಹಾಡು' ಕವನದಲ್ಲಿ ಹೇಗೆ ವ್ಯಕ್ತವಾಗಿದೆ? ವಿವರಿಸಿರಿ.

ಅಥವಾ

ತುಳುವರ ಸಾಹಸ ಹಾಗೂ ಕಾಯಕ ಸಂಸ್ಕೃತಿಯನ್ನು ಕವಿ ಕಯ್ಯಾರರು ಹೇಗೆ ನಿರೂಪಿಸಿದ್ದಾರೆ? ವಿವರಿಸಿರಿ.

2. ಗುರು ಮಾಧವ ಬಾಪಟ್ ಹಾಗೂ ಶಿಷ್ಯ ದತ್ತರ ನಡುವಿನ ಸಂಬಂಧವನ್ನು ಕತೆಗಾರರು ಹೇಗೆ ನಿರೂಪಿಸಿದ್ದಾರೆ? ವಿವರಿಸಿರಿ.

ಅಥವಾ

ಯಂತ್ರಾಧಾರಿತ ಆಧುನೀಕತೆಯು ಉಂಟು ಮಾಡಿರುವ ಅಪಾಯಗಳು ಯಾವುವು? ವಿವರಿಸಿರಿ.

3. ನವ ಮಾಧ್ಯಮಗಳೆಂದರೇನು? ಅವು ಯಾವುವು? ವಿವರಿಸಿರಿ.

ಅಥವಾ

ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಕನ್ನಡದ ಬಳಕೆ ಹೇಗಿದೆ? ವಿವರಿಸಿರಿ.

II. ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿರಿ : **(3 × 5 = 15)**

1. ಭಕ್ತ ಹಾಗೂ ಭಗವಂತನ ಸಂಬಂಧವನ್ನು ವಚನಕಾರ ಹಡಪದ ಅಪ್ಪಣ್ಣ ಹೇಗೆ ವಿವರಿಸಿದ್ದಾನೆ?

ಅಥವಾ

ಜನಪದ ಮುಕ್ತಕಗಳಲ್ಲಿ ತವರಿನ ಮಹತ್ವ ಹೇಗೆ ವ್ಯಕ್ತವಾಗಿದೆ?

2. 'ರಾಜ್ ಕುಮಾರ್ ಒಬ್ಬ ಬೆವರಿನ ಮನುಷ್ಯ' ಎಂಬುದನ್ನು ಪ್ರಬಂಧಕಾರರು ಹೇಗೆ ಸಮರ್ಥಿಸಿಕೊಂಡಿದ್ದಾರೆ?

ಅಥವಾ

'ಮನಸ್ಸಿನ ಒಳಗೊಂದು ಮನೆಯ ಮಾಡಿ' ಪ್ರಬಂಧದ ಆಶಯವೇನು?

3. ನವ ಮಾಧ್ಯಮಗಳ ಸಾಧಕಗಳು ಯಾವುವು? ವಿವರಿಸಿರಿ.

ಅಥವಾ

ಲೇಖನ ಚಿಹ್ನೆಗಳೆಂದರೇನು? ಅವುಗಳು ಯಾವುವು? ವಿವರಿಸಿರಿ.

III. ಈ ಕೆಳಗಿನವುಗಳಲ್ಲಿ ಒಂದರ ಸಂದರ್ಭ ಸೂಚಿಸಿ, ಭಾವಾರ್ಥ ವಿವರಿಸಿರಿ : **(1 × 5 = 5)**

1. ಆಯುಧ ಮಾರಿದ್ದರೇನು?
ರಣರಂಗದಲ್ಲಿ ಹಗೆಯಿ ಗೆಲುವುದು ಒಂದೇ ಅಲಗು
ಏನನೋದಿ ಏನ ಕೇಳಿದರೇನ,
ತಾನಾರೆಂಬುದನರಿಯದನ್ನಕ್ಕ?
ತಾನಾರೆಂಬುದನರಿದ ಬಳಿಕ ನೀನಾರೆಂಬುದಿಲ್ಲ
ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರನು ತಾನೆಯಾಗಿಹನು.

2. ನನ್ನತನ ಹಿಂಡಿ ಡಿವಿಡೆಂಡು ಉಂಡವರೇ
ಜೀವರಸ ಹೀರಿ ತೇಗುಬಿಟ್ಟ ಪ್ರಚಂಡರೇ
ನನಗೆ ಕಾಲದ ಹೊರಳಿನಲ್ಲಿ ತುಂಬ ನಂಬಿಕೆ
ಆದಕ್ಕೇ ಇನ್ನೂ ಕಮರಿಲ್ಲ
ನಿಮ್ಮ ಸ್ಟಾಕುಗಳ ಮುಳುಗಿಸುವ ಬಯಕೆ.

IV. ಯಾವುದಾದರೂ **ಎರಡು** ಸಾಲುಗಳಿಗೆ ಸಂದರ್ಭ, ಸ್ವಾರಸ್ಯ ವಿವರಿಸಿರಿ : **(2 × 4 = 8)**

1. ಸಾವಿರ ಸೌದೆ ಒಲೆಯಲ್ಲಿ ಉರಿದಾರೂ ದೀವಿಗೆಯಂತ ಬೆಳಕುಂಟೆ?
2. ಗಾರುಡವ ತಿಳಿದಡೆ ಹಾವಿನ ಸರಸವೇ ಲೇಸು.
3. ಯಾರದೋ ಮನೆಯ ಬೆಳಗಿದ ಯಾರೋ ಹಚ್ಚಿಟ್ಟ ಹಣತೆ.
4. ಖುಷಿಯ ಡಿವಿಡೆಂಡ್ ಬಂದೀತು ಹೇಗೆ?
   ಬೇವು ಬಿತ್ತಿ ಬಯಸಿದಂತೆ ಮಾವು!

V. (ಅ) ಯಾವುದಾದರೂ **ಎರಡು** ವಿಷಯಗಳಿಗೆ ಟಿಪ್ಪಣಿ ಬರೆಯಿರಿ : **(2 × 4 = 8)**

1. ತೋಂಟದ ಸಿದ್ಧಲಿಂಗ ಶಿವಯೋಗಿ
2. ವಾಸುದೇವ ನಾಡಿಗ್
3. ಜನಪದ ಸಾಹಿತ್ಯ
4. ತುಳು ಭಾಷೆ ಮತ್ತು ಸಾಹಿತ್ಯ

Shri Dharmasthala Manjunatheshwara
College of Business Management Library
MANGALORE - 575 003

(ಆ) ಯಾವುದಾದರೂ **ಎರಡು** ವಿಷಯಗಳಿಗೆ ಟಿಪ್ಪಣಿ ಬರೆಯಿರಿ : **(2 × 4 = 8)**

1. ಬರಗೂರು ರಾಮಚಂದ್ರಪ್ಪ
2. ಬಾನು ಮುಸ್ತಾಕ್
3. ಸಾವಿತ್ರಿಯ ಸ್ವಗತ
4. ಪ್ರಸನ್ನ ಪ್ರಸ್ತಾಪಿಸಿರುವ ಬಹುಮುಖಿ ಸಂಸ್ಕೃತಿ

VI. ಒಂದು ವಾಕ್ಯದಲ್ಲಿ ಉತ್ತರಿಸಿರಿ : **(12 × 1 = 12)**

1. 'ಜನಪದ ಗೀತಾಂಜಲಿ' ಎಂಬ ಕೃತಿಯ ಸಂಪಾದಕರ ಹೆಸರೇನು?
2. ಮೋಳಿಗೆ ಮಾರಯ್ಯ ಯಾವ ದೇಶದವನು?
3. ಡಾ. ಸಿದ್ಧಲಿಂಗಯ್ಯನವರ ಆತ್ಮ ಚರಿತ್ರೆಯ ಹೆಸರೇನು?
4. ತುಳು ಯಾವ ಭಾಷಾ ಪರಿವಾರದ ಭಾಷೆಯಾಗಿದೆ?
5. 'ಬಂಗಾರದ ಮನುಷ್ಯ' ಎಂದು ಖ್ಯಾತಿ ಪಡೆದವರು ಯಾರು?
6. 'ಅಲಕ ತೀರ್ಥಹಳ್ಳಿ'ಯವರ ನಿಜವಾದ ಹೆಸರೇನು?
7. 'ಜೋಗಿ' ಎಂಬುದು ಯಾರ ಕಾವ್ಯನಾಮ?
8. ಪ್ರಸನ್ನ ಅವರ ಹುಟ್ಟೂರು ಯಾವುದು?
9. 'ಸಾಫ್ಟ್‌ವೇರ್' ಎಂಬುದಕ್ಕೆ ಕನ್ನಡದಲ್ಲಿ ಏನೆಂದು ಕರೆಯುತ್ತಾರೆ?
10. 'ಫೇಸ್‌ಬುಕ್'ನ ಮೂಲ ಪರಿಕಲ್ಪನೆ ಯಾವುದು?
11. ವಿಶ್ವದ ಪ್ರಥಮ ಸಾಮಾಜಿಕ ಜಾಲತಾಣದ ಹೆಸರೇನು?
12. ಅಂತರ್ಜಾಲದ ಮೂಲಕ ಕನ್ನಡ ಕಲಿಯಲು ಅವಕಾಶವನ್ನು ಕಲ್ಪಿಸಿರುವ ಜಾಲತಾಣದ ಹೆಸರೇನು?

---